495

ಮೈಸೂರ ಗೆಜೆಟ್ಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ|| 6, ಸ್ ೧೮೮೯.

ಸೂಚನೆ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡಿಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇನ್ಸ್ಟ್ರುಮೆಂಟುಗಳು.

ಫೈನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಂಡೋರ್ಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಿಂದ ರುಜಾ ಮಾಡಿರುವವರ ಅಭೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಪುದ್ದಾಸನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ರಾಪ್ಪಿಕೇಟೂದ ಡಿವಾಂಡ್ ವಾರಂಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಂಡೋರ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಪಡೆಸ್ಕ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖಾ.

ತಾರೀಖು 17ನೇ ಜನವರಿ 1889.

ಸ್ ೧೮೭೮ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕ್ಷನ್ ಅನುಗುಣವಾಗಿ ಇದರಿಂದ ಸಮಸ್ತರಿಗೂ ತಿಳಿಯುವ ಬಗ್ಗೆ ಪೂರ್ವದ ಸ್ಟೇಟ್ ಫಾರೆಸ್ಟ್‌ಗಳನ್ನು ಹೊಸದಾಗಿ ಡಿಮಾರ್ಕೇಟ್ ಮಾಡಲ್ಪಟ್ಟ ಹದ್ದು ಬಸ್ತುಗಳು ಪ್ರಸಿದ್ಧಪಡಿಸಿವೆ.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುಪ್ಯಾಟೆ ತಾಲ್ಲೂಕು ಬೇರಂಬಾಡಿ ಫಾರೆಸ್ಟ್.

ಪೂರ್ವಕ್ಕೆ—ಗುಂಡ್ಲುಪ್ಯಾಟೆ ಸುಲ್ತಾನ್ ಬ್ಯಾಟರಿ ರೋಡ್ 135ನೇ ನಂಬರು ಮೈಲಿಯಿಂದ ದಕ್ಷಿಣಕ್ಕಾಗಿ ಡಿಮಾರ್ಕೇಷನ್ ಲೈನು ಕೆಳಗೆ ನಮೂದಿಸುವ ಸ್ಥಳಗಳ ಮೇಲೆ ಹಾಕಿರುತ್ತೆ.

1 ಚನ್ನವೀರಗವ್ಡನ ಕಟ್ಟೆ
2 ಚಿಕ್ಕನೀರವಸ್ತಿ ಹಳ್ಳ
3 ಕರಡಿಕಲ್ಲು ಬೆಟ್ಟ
4 ತೀರ್ಥ ಕಡುವಿನಹಳ್ಳ
5 ಬೆಂಗೇಕೆಂಜನ ತೋಪು
6 ಸಿದ್ದದೇವರ ಕಣಿವೆ
7 ಹಿಮವತ್‌ಗೋಪಾಲಸ್ವಾಮಿ ಗುಡಿ
8 ಸಂತೆಬೋಲಿಮಾಳ

ದಕ್ಷಿಣಕ್ಕೆ—ಭಂಡೀಪುರದ ಫಾರೆಸ್ಟ್‌ನ್ನು ಯಥಾಪ್ರಕಾರ್ಯಕ್ಕೆ ಹೊಂದಿ ಸಂತೆಬೋಲಿಮಾಳದಿಂದ ಡಿಮಾರ್ಕೇಷನ್ ಲೈನ್‌ಕೆಳಗೆ ನಮೂದಿಸುವ ಮುಖ್ಯವಾದ ಸ್ಥಳಗಳ ಮೇಲೆ ಹಾಕಿರುತ್ತೆ.